# Maharaja Institute of Technology Mysore

## A Unit of Maharaja Education Trust ®

## Department of Civil Engineering

## Press Note

September 28, 2018

ಮಹಾರಾಜ ತಾಂತ್ರಿಕ ಮಹಾವಿದ್ಯಾಲಯ ಮೈಸೂರಿನ ಸಿವಿಲ್ ಇಂಜಿನಿಯರಿಂಗ್ ವಿಭಾಗವು ಇದೇ ೨೬ನೇ ತಾರೀಖು, ಬುಧವಾರದಂದು, ತನ್ನ ಪಠ್ಯ ಪೂರಕ ಚಟುವಟಿಕೆಗಳ ಅಂಗವಾದ 'ಫೋರಂ ಆಫ್ ಸಿವಿಲ್ ಇಂಜಿನಿಯರಿಂಗ್ ' (ಫೋರ್ಸ್)ನ ಪ್ರಸಕ್ತ ಶೈಕ್ಷಣಿಕ ವರ್ಷದ ಚಟುವಟಿಕೆಗಳ ಉದ್ಘಾಟನಾ ಸಮಾರಂಭವನ್ನು ಕಾಲೇಜಿನ ಸರ್ ಎಂ. ವಿ. ಹಾಲ್ ನಲ್ಲಿ ಹಮ್ಮಿಕೊಂಡಿತ್ತು. ಮೈಸೂರಿನ ಹಿರಿಯ ಸಿವಿಲ್ ಇಂಜಿನಿಯರ್ ಹಾಗೂ ಖ್ಯಾತ ಸಂಗೀತ ವಿಮರ್ಶಕರಾದ ಶ್ರೀ ಎಂ ಎಲ್. ಕೃಷ್ಣಸ್ವಾಮಿರವರು ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿ, ಸಂಸ್ಥೆಯ ಪ್ರಾಂಶುಪಾಲರಾದ ಡಾ. ಬಿ. ಜಿ. ನರೇಶ್ ಕುಮಾರ್, ಸಿವಿಲ್ ವಿಭಾಗದ ಮುಖ್ಯಸ್ಥರಾದ ಡಾ. ಸಿ. ರಾಮಕೃಷ್ಣೇಗೌಡ ಹಾಗೂ ಕಾರ್ಯಕ್ರಮದ ಸಂಯೋಜಕರಾದ ಸಿವಿಲ್ ಸಹಪ್ರಾಧ್ಯಾಪಕರಾದ ಅನಿರುದ್ಧ ಎ. ಎಂ. ರೊಂದಿಗೆ ಉದ್ಘಾಟನೆಯನ್ನು ನೆರವೇರಿಸಿದರು. ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಿದ್ದ ಸಿವಿಲ್ ಎಂಜಿನಿಯರಿಂಗ್ ಮಾಡಲ್, ಛಾಯಾಚಿತ್ರ, ಪೋಸ್ಟರ್ ಹಾಗೂ ಚಿತ್ರಕಲಾ ಪ್ರದರ್ಶನವನ್ನು ವೀಕ್ಷಿಸಿದರು. ನಂತರ ಮಾತನಾಡಿದ ಅತಿಥಿಗಳು, ೪೦೦ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದ ಸಿವಿಲ್ ವಿಭಾಗದ ವಿದ್ಯಾರ್ಥಿಗಳ ಕುರಿತಾದ ತಮ್ಮ ಭಾಷಣದಲ್ಲಿ, ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯನವರ ಬಗೆಗಿನ ಅನೇಕ ವಿಷಯಗಳ ಬಗ್ಗೆ ಸವಿಸ್ತಾರವಾಗಿ ಮಾಹಿತಿ ನೀಡಿದರು. ತಮ್ಮ ಕಾರ್ಯಕ್ಷೇತ್ರದಲ್ಲಿನ ೫ ದಶಕಗಳಿಗೂ ಮೀರಿದ ಸೇವೆಯಿಂದ ಪಡೆದ ಅನುಭವವನ್ನೂ ಹಂಚಿಕೊಂಡರಲ್ಲದೆ, ನೂತನ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು.



**ಚಿತ್ರ ೧:** ಎ-ಬ, ಸಿವಿಲ್ ವಿಭಾಗದ ಮುಖ್ಯಸ್ಥರಾದ ಡಾ. ಸಿ. ರಾಮಕೃಷ್ಣೇಗೌಡ, ಸಿವಿಲ್ ಸಹಪ್ರಾಧ್ಯಾಪಕರಾದ ಅನಿರುದ್ಧ ಎ. ಎಂ., ಸಂಸ್ಥೆಯ ಪ್ರಾಂಶುಪಾಲರಾದ ಡಾ. ಬಿ. ಜಿ. ನರೇಶ್ ಕುಮಾರ್ ಹಾಗೂ ಮುಖ್ಯ ಅತಿಥಿಗಳಾದ ಮೈಸೂರಿನ ಹಿರಿಯ ಸಿವಿಲ್ ಇಂಜಿನಿಯರ್ ಹಾಗೂ ಖ್ಯಾತ ಸಂಗೀತ ವಿಮರ್ಶಕರಾದ ಶ್ರೀ ಎಂ ಎಲ್. ಕೃಷ್ಣಸ್ವಾಮಿರವರು ಉದ್ಘಾಟನೆಯನ್ನು ನೆರವೇರಿಸುತ್ತಿರುವುದು.





ಚಿತ್ರ ೨& ೩: ಎ-ಬ, ಸಿವಿಲ್ ಸಹಪ್ರಾಧ್ಯಾಪಕರಾದ ಅನಿರುದ್ಧ ಎ. ಎಂ. ಹಾಗೂ ಸಿವಿಲ್ ವಿಭಾಗದ ಮುಖ್ಯಸ್ಥರಾದ ಡಾ. ಸಿ. ರಾಮಕೃಷ್ಣೇಗೌಡರವರು ಮುಖ್ಯ ಅತಿಥಿಗಳಾದ ಶ್ರೀ ಎಂ ಎಲ್. ಕೃಷ್ಣಸ್ವಾಮಿರವರಿಗೆ ತಮ್ಮ ವಿದ್ಯಾರ್ಥಿಗಳು ಮಾಡಿದ್ದ ಮಾಡಲ್ ಗಳನ್ನು ಪ್ರದರ್ಶಿಸುತ್ತಿರುವುದು.



ಚಿತ್ರ ೪: ಮುಖ್ಯ ಅತಿಥಿಗಳಾದ ಶ್ರೀ ಎಂ ಎಲ್. ಕೃಷ್ಣಸ್ವಾಮಿರವರು ವಿದ್ಯಾರ್ಥಿಗಳನ್ನು ಕುರಿತು ಮಾತನಾಡುತ್ತಿರುವುದು.

ತಮ್ಮ ವಿಶ್ವಾಸಿ


**Aniruddha A. M.**
Asst. Prof. of Civil Engg. & Media Coordinator
Mob: 9241 032 032

**Dr. B. G. Naresh Kumar**
Principal